ವಿರುದ್ಧ ಸ್ಪರ್ಧಿಸಿ, ಡಿಪಾಜಿಟ್ ಉಳಿಸಿಕೊಂಡ ಹೆಮ್ಮೆ, ಡಿಪಾಜಿಟ್ ಕಳಕೊಂಡ ಇನ್ನೊಬ್ಬಾತ ತನಗಿಂತಲೂ ಕಮ್ಮಿ ಓಟು ಪಡೆದವನತ್ತ ಬೆರಳು ತೋರಿಸುತ್ತಾನೆ. 'ಅವನಿಗಿಂತ ನಾನೆ ಎಷ್ಟೋ ವಾಸಿ' ಎಂದು ಮೀಸೆಗೆ ಹತ್ತಿದ್ದ ಮಣ್ಣು ಒರೆಸಿಕೊಳ್ಳುತ್ತಾನೆ.

'ನೀರ್ ಸುರ್ದಾಂಗ ರೊಕ್ಕಾ ಸುರುವಿ, ಆರಿಸಿ ಬರೋದರಾಗ ಏನ್ ಅಂಥಾ ಕಿಸಾಮತಿ ಅದ ಬಿಡ್ರೀ...' ಎನ್ನುತ್ತಾನೆ. 'ಆದ್ರ, ನಾನು ತತ್ತ್ವದ ಮನಸ್ಯಾ... ಹಂಗೆಲ್ಲಾ ನೀತಿ ನಿಯಮಾ ಬಿಡೊಂವಲ್ಲಾ' ಎಂದು ಸ್ವರತಿಗಿಳಿಯುತ್ತಾನೆ. ಈತ ಅವನ ಹಾಗೆ ನೀರಿನಂತೆ ಹಣ ಸುರಿದಿಲ್ಲ, ಅದಕ್ಕೆ ಕಾರಣ ಅವನ ಹತ್ತಿರ ಅಷ್ಟೊಂದು ದುಡ್ಡು ಇರೋದಿಲ್ಲ. ಆದ್ರೂ ತನ್ನ ಆ ಸ್ಥಿತಿಗೆ ನೀತಿಯ ಮುಖವಾಡ ಹಾಕುತ್ತಾನೆ.

'ಅರಮನೆಯಲ್ಲಿ ಇರಲೊಲ್ಲ, ಅಂಬಾರಿ ಏರಲೊಲ್ಲ, ರೇಶ್ಮೆ ಬಟ್ಟೆ ತೊಡಲೊಲ್ಲ, ಬಂಗಾರದ ತಾಟಿನಲ್ಲಿ ಉಣಲೊಲ್ಲ, ರಾಜಕುಮಾರಿಯನ್ನ ಮದ್ವೆಯಾಗಲೊಲ್ಲ, ಯಾಕೊಲ್ಲ?... ಇಲ್ಲದ್ದಕ್ಕೆ ಒಲ್ಲ' ಎಂದು ಹಾಡುತ್ತ ಬರುತ್ತಿದ್ದ ಆ ಕೋಲೆ ಬಸವನಾಟದವರು ನೆನಪಿಗೆ ಬರುತ್ತಾರೆ. ಆ ಎಲ್ಲ ಪದಾರ್ಥಗಳಿದ್ದರೆ, ಇವರಾರೂ ಸುಮ್ಮನೆ ಇರೋರಲ್ಲ, ಒಂದು ಕೈ ನೋಡಿಯೇ ಬಿಡುವವರು. ಆ ಮಾತು ಬೇರೆ.

